ಸಿ ಸಿ ನಂ. 1037 /2017

<u>ಸಾಕ್ಷಿಗೆ ದಿನಾಂಕ 25-11-2022 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 4 P.W.: 1

ಹೆಸರು : ವೀರಣ್ಣ
ತಂದೆಯ ಹೆಸರು : ಬಸಪ್ಪ
ವಯಸ್ಸು : 60 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಪೆಣಗಿ ಬಸಾಪುರ

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

1 ನೇ ಆರೋಪಿ ನನ್ನ ತಮ್ಮ, 2 ನೇ ಆರೋಪಿತಳು ನನ್ನ ಸೊಸೆ, 3 ಮತ್ತು 4 ನೇ ಆರೋಪಿತರು ನನ್ನ ತಮ್ಮನ ಮಕ್ಕಳು. ಚಾಸಾ-1 ನನ್ನ ಹೆಂಡತಿ, ಚಾಸಾ-5 ರಿಂದ 7 ನನ್ನ ಮಕ್ಕಳು.

ದಿಃ 21-03-2015 ರಂದು ಸಂಜೆ 6.30 ರಿಂದ 7 ಗಂಟೆಯ ಸಮಯದಲ್ಲಿ ನನ್ನ ತಂದೆ ತಾಯಿಗಳಿಗೆ ಜೀವನಾಂಶಕ್ಕಾಗಿ ತೆಗೆದಂತಹ ಜಮೀನನ್ನು ಕೊಡುವ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಜಗಳವಾಗಿದ್ದು ನನಗೆ 1 ನೇ ಆರೋಪಿಯು ನನಗೆ ಹಗುರವಾದ ಅವಾಚ್ಯ ಶಬ್ದಗಳಿಂದ ಬೈದರು. ನಾನು ಸಮಾಧಾನದಿಂದ ಏಕೆ ಬೈಯುತ್ತೀಯಾ ಎಂದು ಕೇಳಿದಾಗ ಆಗ ನನ್ನ ಮಗನಾದ ಚಾಸಾ-6 ರವರು ನನ್ನ ತಂದೆಯನ್ನು ಏಕೆ ಬೈಯುತ್ತಿರಾ ಎಂದು ಕೇಳಿದಾಗ ನಮ್ಮ ಭೂಮಿಯನ್ನು ಕೊಡದಿದ್ದರೇ ನಾವು ಜೀವಂತ ಇರುವವರೆಗೂ ನಮ್ಮನ್ನು ನೋಡಿಕೊಳ್ಳುವುದಾಗಿ ಜೀವಬೆದರಿಕೆಯನ್ನು ಹಾಕಿ ಭಯವನ್ನುಂಟು ಮಾಡಿರುತ್ತಾರೆ.

ನನ್ನ ಮಗನಾದ ಚಾಸಾ-6 ರವರಿಗೆ 2 ನೇ ಆರೋಪಿಯು ಕೋಲಿನಿಂದ ಎಡಪಕ್ಕೆಗೆ ಹೊಡೆದರು. ನನ್ನ ಇನ್ನೊಬ್ಬ ಮಗನಾದ ಚಾಸಾ-5 ರವರಿಗೆ 4 ನೇ ಆರೋಪಿಯು ಇಟ್ಟಿಗೆಯಿಂದ ಆತನ ಮರ್ಮಾಂಗಕ್ಕೆ ಹೊಡೆದರು. ಆಗ ಚಾಸಾ-1 ನನ್ನ ಹೆಂಡತಿ ಜಗಳ ಬಿಡಿಸಲು ಬಂದಾಗ 2 ನೇ ಆರೋಪಿಯು ಕೂದಲನ್ನು ಹಿಡಿದು ಎಳೆದಾಡಿ ಆಕೆಯ ಕೊರಳಿನಲ್ಲಿದ್ದ ಮಾಂಗಲ್ಯ ಸರವನ್ನು ಕಿತ್ತುಹಾಕಿದರು. ಅದನ್ನು ಕೊಡು ಎಂದು ಕೇಳಿದಾಗ ಇಲ್ಲವೆಂದು

ಹೇಳಿರುತ್ತಾರೆ. ನನ್ನ ಹೆಂಡತಿಯನ್ನು ಕೂಡಾ ಹೊಡೆದಿರುತ್ತಾರೆ. ಸದರಿ ಜಗಳದ ಬಗ್ಗೆ ಚಾಸಾ-1 ನನ್ನ ಹೆಂಡತಿ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತಾರೆ. ನ್ಯಾಯಾಲಯದ ಸಮಕ್ಷಮದಲಿಲರುವ ಒಂದು ಕಟ್ಟಿಗೆಯನ್ನು ಹಾಗೂ ಅರ್ಧ ಇಟ್ಟಿಗೆ ತುಂಡನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಾನು ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಹಾಗೂ ನ್ಯಾಯಾಲಯದ ಸಮಕ್ಷಮದಲ್ಲಿರುವ ಒಂದು ಕಟ್ಟಿಗೆ ಮತ್ತು ಅರ್ಧ ಇಟ್ಟಿಗೆಯ ತುಂಡನ್ನು ಮು ಮಾ-1 ಮತ್ತು 2 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು. 1 ರಿಂದ 4 ನೇ ಆರೋಪಿತರ ಪರ ಶ್ರೀ ಪಿ ಆರ್ ವಕೀಲರಿಂದಃ-</u>

ನಮ್ಮ ಹೊಲಕ್ಕೆ ಸಂಬಂಧಿಸಿದಂತೆ ಸಾಕಷ್ಟು ರಾಜೀ ಪಂಚಾಯ್ತಿಗಳಾಗಿರುತ್ತವೆಂದರೆ ಸರಿ. ನನ್ನ ತಂದೆಯಿಂದ ಬಂದಂತಹ ಆಸ್ತಿಯ ಹೆಚ್ಚು ಭಾಗವನ್ನು ನಾನೇ ಉಳುಮೆ ಮಾಡುತ್ತೇನೆಂದರೆ ಸರಿಯಲ್ಲ. ಹೊಲಕ್ಕೆ ಸಂಬಂಧಿಸಿದಂತೆ ನನ್ನ ಮತ್ತು 1 ನೇ ಆರೋಪಿ ನಡುವೆ ಸಿವಿಲ್ ದಾವೆಯು ಚಾಲ್ತಿಯಲ್ಲಿರುತ್ತದೆಂದರೆ ಸರಿ. ನನ್ನ ಹೆಸರಿನಲ್ಲಿ ಯಾವುದೇ ಭೂಮಿ ಇರುವುದಿಲ್ಲ. ನನ್ನ ಹೆಂಡತಿ ಚಾಸಾ-1 ರವರ ಹೆಸರಿನಲ್ಲಿರುತ್ತದೆ.

2 ನೇ ಆರೋಪಿತಳು ನಮ್ಮ ವಿರುದ್ಧ ಪ್ರಕರಣ ದಾಖಲುಪಡಿಸಿರುತ್ತಾರೆಂದರೆ ಸರಿ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ 2 ನೇ ಆರೋಪಿತಳು ನಮ್ಮ ವಿರುದ್ಧ ದೂರನ್ನು ದಾಖಲುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕ್ರಿಮಿನಲ್ ಮೊಕದ್ದಮೆ ನಂ 1035/2017 ರಲ್ಲಿ 2 ನೇ ಆರೋಪಿತಳು ಸಾಕ್ಷ್ಯವನ್ನು ನುಡಿದಿರುತ್ತಾರೆಂದರೆ ಸರಿ. ಚಾಸಾ-1 ಮತ್ತು ನನ್ನ ಮಕ್ಕಳು ದೂರನ್ನು ಕೊಡಲು ತಂಬ್ರಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದು ಸಮಯ ಹೇಳಲು ಗೊತ್ತಿರುವುದಿಲ್ಲ. ನನ್ನ

ಹೆಂಡತಿ ಚಾಸಾ-1 ಮತ್ತು ಚಾಸಾ-7 ನನ್ನ ಮಗ ದೂರನ್ನು ಕೊಡಲು ಹೋಗಿದ್ದರು. ಘಟನಾ ದಿನ ಜಗಳದಲ್ಲಿ 1 ನೇ ಆರೋಪಿಯು ನನಗೆ, ನನ್ನ ಹೆಂಡತಿ ಮತ್ತು ಮಕ್ಕಳಿಗೆ ಬೈದರು.

ಲೇ ಸೂಳೆಮಗನಾ ಹೊಲವನ್ನು ಬರೆದುಕೊಡು ಇಲ್ಲದಿದ್ದರೇ ನಿನ್ನನ್ನು ಜೀವಂತವಾಗಿ ಬಿಡುವುದಿಲ್ಲವೆಂದುವೆಂದು ಅವಾಚ್ಯ ಶಬ್ದಗಳಿಂದ ಬೈದರು. ಚಾಸಾ-1 ನನ್ನ ಹೆಂಡತಿಗೆ ಮತ್ತು ನನ್ನ ಮಕ್ಕಳಿಗೆ ಆರೋಪಿತರು ನಮ್ಮ ಹತ್ತಿರ ಜಗಳವಾಡಲು ಬರಬೇಡಿ ನಿಮಗೆ ಉಳಿಗಾಲವಿಲ್ಲವೆಂದು ಬೈದರು. 3 ನೇ ಆರೋಪಿ ಕಟ್ಟಿಗೆಯಿಂದ ಚಾಸಾ-6 ರವರಿಗೆ ಪಕ್ಕೆಗೆ ಹೊಡೆದರು, 4 ನೇ ಆರೋಪಿಯು ಚಾಸಾ-5 ರವರಿಗೆ ಇಟ್ಟಿಗೆಯಿಂದ ಆತನ ಮರ್ಮಾಂಗದ ಎಡಭಾಗಕ್ಕೆ ಹೊಡೆದರು. ಮು ಮಾ-1 ಮತ್ತು 2 ರಂತಹ ಮುದ್ದೆಮಾಲುಗಳು ಹೊರಗಡೆ ಸಾಕಷ್ಟು ಸಿಗುತ್ತವೆಂದರೆ ಸರಿ. ನಾವೇ ಹೋಗಿ ಸಂಜೆ 5.30 ರ ಸಮಯದಲ್ಲಿ ಆರೋಪಿಗಳ ಮೇಲೆ ದಾಳಿ ಮಾಡಿರುತ್ತೇವೆಂದರೆ ಸರಿಯಲ್ಲ. ಆರೋಪಿಗಳಿಗೆ ನಾವು ಅವಾಚ್ಯ ಶಬ್ದಗಳಿಂದ ಬೈದಿರುತ್ತೇವೆಂದರೆ ಸರಿಯಲ್ಲ. 2 ನೇ ಆರೋಪಿತಳಿಗೆ ನಾನು ಅವಾಚ್ಯ ಶಬ್ದಗಳಿಂದ ಬೈದಿರುತ್ತೇನೆಂದರೆ ಸರಿಯಲ್ಲ. ಸದರಿ ಗಲಾಟೆಯಲ್ಲಿ 2 ನೇ ಆರೋಪಿತಳ ತಾಳಿ ಚೈನು ಹರಿದುಹೋಗಿತ್ತು ಎಂದರೆ ಸರಿಯಲ್ಲ. ಸದರಿ ಗಲಾಟೆಯಲ್ಲಿ ನಾವು 2 ನೇ ಆರೋಪಿತಳ ಮಗನಾದ ಜಗದೀಶನ ಕೈಗೆ ಗಾಯವನ್ನು ಮಾಡಿರುತ್ತೇವೆಂದರೆ ಸರಿಯಲ್ಲ. 2 ನೇ ಆರೋಪಿತಳು ತನ್ನ ಮಗನಿಗೆ ಗಾಯವನ್ನು ಉಂಟುಪಡಿಸಿದ ಕಾರಣ ನಮ್ಮ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದು ಆ ಸಂಬಂಧ ನಾವು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇವೆಂದರೆ ಸರಿಯಲ್ಲ.

ಚಾಸಾ-7 ನನ್ನ ಮಗ ಅಶೋಕ ಹಾಗೂ ಇನ್ನೊಬ್ಬರು ಮೋಟಾರು ಸೈಕಲ್ಲಿನಲ್ಲಿ ನನ್ನ ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಮೋಟಾರ್ ಸೈಕಲ್ ನಂ. ಕೆಎ-35, 6433 ನನ್ನ

ಹೆಸರಿನಲ್ಲಿ ಇರುತ್ತದೆ. ಇನ್ನೊಬ್ಬರ ಹೆಸರನ್ನು ಹೇಳಲು ನೆನಪಿರುವುದಿಲ್ಲ. ನಾನು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ದಿನಾಂಕಃ 22-03-2017 ರ ಸಂಜೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಪೋಲೀಸ್ ಅಧಿಕಾರಿಯ ಹೆಸರನ್ನು ಹೇಳಲು ನೆನಪಿರುವುದಿಲ್ಲ. 1 ರಿಂದ 4 ನೇ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಜೀವಬೆದರಿಕೆಯನ್ನು ಹಾಕಿರುವುದಿಲ್ಲವೆಂದರೆ ಸರಿಯಲ್ಲ. ನಮ್ಮ ಹೊಲ ಅವರಿಗೆ ಹೋಗುತ್ತದೆಂದು ನಾವು ಅವರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇವೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ